ಕ್ರ ಸಂ	ಕ್ಷೇತ್ರ / ತಾಲ್ಲೂಕು	ಒಟ್ಟು
3	ಮಂಗಳೂರು	220
4	ಪುತ್ತೂರು	15
5	ಸೂಳ್ಯ	15
6	ಉಳ್ಳಾಲ	81
7	ಸುರತ್ಕಲ್	55
8	ಮುಲ್ಕಿ – ಮೂಡಿಬಿದರೆ	65
9	ವಿರಲ	20
	ಒಟ್ಟು	516

ಕ್ರ ಸಂ	ಕ್ಷೇತ್ರ / ತಾಲ್ಲೂಕು	ಒಟ್ಟು
6	ಬ್ರಹ್ಮಾವರ	50
	ಒಟ್ಟು	2752
	ಧಾರವಾಡ	
1	ಧಾರವಾಡ	5
2	ಹುಬ್ಲಿ	10
3	ಕಲಘಟಗಿ	35
4	ಕುಂದಗೋಳ	15
	ಒಟ್ಟು	65

ಒಟ್ಟು ಎಲ್ಲಾ 16644

126 (132) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ (ಬ್ರಹ್ಮಾವರ) ಮಾನ್ಯ ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ರಾಜ್ಯದಲ್ಲಿ ಕುಡಿಯುವ ನೀರಿನ ಯೋಜನೆಯ ಅನುಷ್ಠಾನವು ಯಾರ ವ್ಯಾಪ್ತಿಗೆ ಬರುತ್ತದೆ

ಆ) ಈ ಯೋಜನೆಯ ಅನುಷ್ಠಾನದಲ್ಲಿ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ, ಜಿಲ್ಲಾ ಪಂಚಾಯತಿ ಮತ್ತು ಶಾಸಕರ ಪಾತ್ರವೇನು?

ಶ್ರೀ ಎಸ್ ಎ ರವೀಂದ್ರನಾಥ್ (ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಮತ್ತು ಸಕ್ಕರೆ ಸಚಿವರು)

ಅ) ಗ್ರಾಮೀಣ ಕುಡಿಯುವ ನೀರಿನ ಯೋಜನೆಯ ಅನುಷ್ಠಾನವು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪಂಚಾಯತ್ ರಾಜ್ ಸಂಸ್ಥೆಗಳ ವ್ಯಾಪ್ತಿಗೆ ಬರುತ್ತದೆ

ಆ) ತುರ್ತು ಕುಡಿಯುವ ನೀರಿನ ಕಾಮಗಾರಿಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ಅನುಷ್ಠಾನಗೊಳಿಸಲು ಮತ್ತು ನಿಯಮಾನುಸಾರ

ಟಾಸ್ಕ್‌ಫೋರ್ಸ್‌ನಡಿ ಅನುಷ್ಠಾನಗೊಳಿಸಿದ ಅನುಮೋದಿತ ಕಾಮಗಾರಿಗಳ ಬಿಲ್ಲು ಪಾವತಿಸಲು ಪಂಚಾಯತ್ ರಾಜ್ ಸಂಸ್ಥೆಗಳು ಕ್ರಮವಹಿಸುತ್ತವೆ ಇದಲ್ಲದೆ ಸಾಮಾನ್ಯ ಕಾರ್ಯಕ್ರಮಗಳಡಿ ಗ್ರಾಮ ಪಂಚಾಯತಿಗಳ ಪ್ರಸ್ತಾವನೆಗಳನ್ನು ಚಾಲ್ತಿಯಲ್ಲಿರುವ ಚಟುವಟಿಕೆ ನಕ್ಷೆ ಹಾಗೂ ಆಯಾ ಯೋಜನಾ ಮಾರ್ಗದರ್ಶಿಗಳ ಪ್ರಕಾರ ತಾಲ್ಲೂಕು ಪಂಚಾಯತಿ ಪರಿಶೀಲಿಸಿ, ಅನುದಾನ ಲಭ್ಯತೆ ಆಧರಿಸಿ, ಅನುಮೋದನೆ ನೀಡಲು ಜಿಲ್ಲಾ ಪಂಚಾಯತಿಗೆ ಪ್ರಸ್ತಾವನೆ ಸಲ್ಲಿಸುತ್ತದೆ ಇವುಗಳಲ್ಲಿ ಶಾಸಕರ ಮನವಿ / ಶಿಫಾರಸ್‌ಗಳನ್ನು ಸಹ ಆಯಾ ಯೋಜನಾ ಮಾರ್ಗದರ್ಶಿಗಳ ಪ್ರಕಾರ ಅಳವಡಿಸಲಾಗುತ್ತದೆ

127 (268) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ (ಬ್ರಹ್ಮಾವರ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ರಾಜ್ಯದಲ್ಲಿ ಕೃಷಿಕರಿಗೆ ಸಬ್ಸಿಡಿ ದರದಲ್ಲಿ ಬಿತ್ತನೆ ಬೀಜಗಳನ್ನು ವಿತರಿಸಲು ವಾರ್ಷಿಕ ಎಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ , (ಜಿಲ್ಲಾವಾರು ಮಾಹಿತಿ ನೀಡುವುದು) ,

ಆ) ಹಾಗಿದ್ದಲ್ಲಿ, ಬೀಜಗಳನ್ನು ಒದಗಿಸುವಾಗ ಯಾವ ಯಾವ ಬೆಳೆಗಳಿಗೆ ಸಬ್ಸಿಡಿಯನ್ನು ಒದಗಿಸಲಾಗುವುದು ?

ಶ್ರೀ ಬಂಡೆಪ್ಪ ಕಾಶಂಪೂರ (ಕೃಷಿ ಸಚಿವರು)

ಅ) 2006–07ನೇ ಸಾಲಿನಲ್ಲಿ ರಾಜ್ಯದ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಶೇಕಡಾ 75ರ ರಿಯಾಯಿತಿ ದರದಲ್ಲಿ ವಿತರಿಸಲು ಇಲ್ಲಿಯವರೆಗೆ 87 00 , ಕೋಟಿ ರೂ ಗಳನ್ನು ಬಿಡುಗಡೆ ಮಾಡಲಾಗಿದ್ದು ಉಳಿದ ಅನುದಾನ ಬಿಡುಗಡೆ ವಿಷಯವು ಪರಿಶೀಲನೆಯಲ್ಲಿದೆ ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ

ಆ) ಮುಂಗಾರು ಹಂಗಾಮಿನಲ್ಲಿ ಬೆಳೆಗಳಾದ ಭತ್ತ, ರಾಗಿ, ಜೋಳ, ಸಜ್ಜೆ, ಮುಸುಕಿನಜೋಳ, ತೊಗರಿ, ಹೆಸರು, ಉದ್ದು, ಅಲಸಂದೆ, ಶೇಂಗಾ, ಸೂರ್ಯಕಾಂತಿ, ಸೋಯ ಅವರೆ ಹಾಗೂ ಹತ್ತಿ ಬೆಳೆಗಳ ಬಿತ್ತನೆ ಬೀಜಕ್ಕೆ ಮತ್ತು ಹಿಂಗಾರು ಹಂಗಾಮಿನಲ್ಲಿ ಹಿಂಗಾರಿ ಜೋಳ, ಗೋಧಿ, ಕಡಲೆ, ಸೂರ್ಯಕಾಂತಿ ಮತ್ತು ಕುಸುಬೆ ಬೆಳೆಗಳ ಬಿತ್ತನೆ ಬೀಜಕ್ಕೆ ಶೇಕಡ 75 ರಷ್ಟು ನೀಡಲಾಗಿರುತ್ತದೆ